# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ | 984 |
| ಸದಸ್ಯರ ಹೆಸರು | ಶ್ರೀ ಕೆ.ಎ. ತಿಪ್ಪೇಸ್ವಾಮಿ<br>(ನಾಮ ನಿರ್ದೇಶನ ಹೊಂದಿದವರು) |
| ಉತ್ತರಿಸುವ ದಿನಾಂಕ | 23-02-2024 |
| ಉತ್ತರಿಸುವ ಸಚಿವರು | ಕೃಷಿ ಸಚಿವರು |

<table>
<tr><th>ಕ್ರ. ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ರಾಜ್ಯದಲ್ಲಿ ಹತ್ತಿ ಬೆಳೆಯನ್ನು ಎಷ್ಟು ಕ್ಷೇತ್ರದಲ್ಲಿ ಬೆಳೆಯಲಾಗುತ್ತಿದೆ; ಮತ್ತು ವರ್ಷವಾರು ಉತ್ಪಾದನೆ ಎಷ್ಟು; ವರ್ಷವಾರು ಮತ್ತು ಜಿಲ್ಲಾವಾರು ಪೂರ್ಣ ಮಾಹಿತಿ ನೀಡುವುದು;</td><td>ರಾಜ್ಯದಲ್ಲಿ ಕಳೆದ ಮೂರು ವರ್ಷದ ಹತ್ತಿ ಬೆಳೆಯ ವಿಸ್ತೀರ್ಣ ಹಾಗೂ ಉತ್ಪಾದನೆಯ ವಿವರ ಈ ಕೆಳಕಂಡಂತಿದೆ.<br><br>
<table>
<tr><th>ಕ್ರ. ಸಂ.</th><th>ವರ್ಷ</th><th>ವಿಸ್ತೀರ್ಣ (ಲಕ್ಷ ಹೆ.ಗಳಲ್ಲಿ)</th><th>ಉತ್ಪಾದನೆ (ಲಕ್ಷ ಟನ್ ಗಳಲ್ಲಿ)</th></tr>
<tr><td>1</td><td>2020-21</td><td>8.37</td><td>23.17</td></tr>
<tr><td>2</td><td>2021-22</td><td>6.88</td><td>19.53</td></tr>
<tr><td>3</td><td>2022-23</td><td>9.69</td><td>30.39</td></tr>
</table>
<br>ಕಳೆದ ಮೂರು ವರ್ಷದ ಹತ್ತಿ ಬೆಳೆಯ ವರ್ಷವಾರು ಮತ್ತು ಜಿಲ್ಲಾವಾರು ಮಾಹಿತಿಯನ್ನು ಅನುಬಂಧದಲ್ಲಿ ಒದಗಿಸಲಾಗಿದೆ.</td></tr>
<tr><td>ಆ)</td><td>ರಾಜ್ಯದಲ್ಲಿ ಹತ್ತಿ ಮಾರಾಟಕ್ಕೆ ಇರುವ ವ್ಯವಸ್ಥೆಗಳು ಯಾವುವು; ಮತ್ತು ಈ ವ್ಯವಸ್ಥೆಯಿಂದ ರೈತರಿಗೆ ಅಗತ್ಯವಿರುವ ದಾಸ್ತಾನು ಬೆಂಬಲ ಬೆಲೆ ಮತ್ತು ಸಾಲ-ಮುಂಗಡ ದೊರೆಯುತ್ತಿದೆಯೇ; ಹಾಗಿದ್ದಲ್ಲಿ, ಇಲಾಖೆಗಳಿಂದ ನೀಡುತ್ತಿರುವ ಉತ್ತೇಜನ ಪ್ರೋತ್ಸಾಹ ಮತ್ತು ನೆರವುಗಳು ಯಾವುವು; ಪೂರ್ಣ ಮಾಹಿತಿ ನೀಡುವುದು?</td><td>ಸಹಕಾರ ಇಲಾಖೆಯಿಂದ ರಾಜ್ಯದಲ್ಲಿ 93 ಅಧಿಸೂಚಿತ ಕೃಷಿ ಉತ್ಪನ್ನಗಳನ್ನು ಮಾರಾಟ ನಿಯಂತ್ರಣ ಕಕ್ಷೆಗೆ ಒಳಪಡಿಸಲಾಗಿದೆ. ಅವುಗಳಲ್ಲಿ ಹತ್ತಿ ಉತ್ಪನ್ನವು ಒಳಗೊಂಡಿರುತ್ತದೆ. ಹತ್ತಿ ಬೆಳೆಯುವ ಪ್ರಮುಖ ಜಿಲ್ಲೆಗಳಾದ ಚಿತ್ರದುರ್ಗ, ಮೈಸೂರು, ಶಿವಮೊಗ್ಗ, ಬೆಳಗಾವಿ, ವಿಜಯಪುರ, ಉತ್ತರ ಕನ್ನಡ, ಹಾವೇರಿ, ಗದಗ, ಧಾರವಾಡ, ಬಳ್ಳಾರಿ, ಯಾದಗಿರಿ, ರಾಯಚೂರು, ಕೊಪ್ಪಳ, ಕಲಬುರುಗಿ ಜಿಲ್ಲೆಗಳಲ್ಲಿನ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳ ಮಾರುಕಟ್ಟೆ ಪ್ರಾಂಗಣಗಳಲ್ಲಿ ಹತ್ತಿ ವಹಿವಾಟಿಗೆ ಪೂರಕ ಸೌಲಭ್ಯಗಳನ್ನು ಕಲ್ಪಿಸಿ ವಹಿವಾಟಿಗೆ ಅವಕಾಶ ಕಲ್ಪಿಸಲಾಗಿದೆ. 2023-24ನೇ ಸಾಲಿನಲ್ಲಿ ರೈತರಿಂದ ಹತ್ತಿ ಉತ್ಪನ್ನವನ್ನು ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿ ಖರೀದಿಸುವ ಸಂಬಂಧ ಜಿನ್ನಿಂಗ್ ಮತ್ತು ಪ್ರೆಸ್ಸಿಂಗ್ ಘಟಕಗಳನ್ನು ಮಾರುಕಟ್ಟೆ ಉಪ ಪ್ರಾಂಗಣ/ಉಪ ಮಾರುಕಟ್ಟೆ ಪ್ರಾಂಗಣಗಳೆಂದು ಘೋಷಿಸಲಾಗಿದೆ.</td></tr>
</table>

| | | |
|---|---|---|
| | | 2023-24ನೇ ಸಾಲಿಗೆ ಬೆಂಬಲ ಬೆಲೆ ಯೋಜನೆಯಡಿಯಲ್ಲಿ ಭಾರತೀಯ ಹತ್ತಿ ನಿಗಮದ ವತಿಯಿಂದ ಹತ್ತಿ ಬೆಳೆಯುವ ಜಿಲ್ಲೆಗಳ ಸುಮಾರು 6,171 ರೈತರಿಂದ 3,08,524 ಕ್ವಿಂಟಾಲ್‌ಗಳಷ್ಟು ಹತ್ತಿಯನ್ನು ಖರೀದಿಸಲಾಗಿರುತ್ತದೆ.<br><br>ಕೃಷಿ ಇಲಾಖೆಯಿಂದ ಹತ್ತಿ ಬೆಳೆಯ ಉತ್ಪಾದನೆ ಮತ್ತು ಉತ್ಪಾದಕತೆ ಹೆಚ್ಚಿಸಲು ಆಹಾರ ಮತ್ತು ಪೌಷ್ಟಿಕ ಭದ್ರತೆ ಯೋಜನೆಯ ವಾಣಿಜ್ಯ ಬೆಳೆಗಳ ಕಾರ್ಯಕ್ರಮವನ್ನು ಹತ್ತಿ ಬೆಳೆಯುವ ರಾಜ್ಯದ 7 ಜಿಲ್ಲೆಗಳಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ. ಸದರಿ ಕಾರ್ಯಕ್ರಮದಡಿ ಪ್ರಾತ್ಯಕ್ಷಿಗಳು, ಸಸ್ಯ ಸಂರಕ್ಷಣಾ ಔಷಧಿಗಳು ಮತ್ತು ಜೈವಿಕ ನಿಯಂತ್ರಣಕಾರಕಗಳ ವಿತರಣೆಗೆ ಶೇಕಡ 50ರ ರಿಯಾಯಿತಿ ದರದಲ್ಲಿ ಅವಕಾಶ ಕಲ್ಪಿಸಲಾಗಿದೆ. |
| ಇ) | ರಾಜ್ಯದಲ್ಲಿ ಇತ್ತೀಚಿನ ವರ್ಷಗಳಲ್ಲಿ ಹತ್ತಿ ಬೆಳೆಗೆ ಪಿಂಕ ಬೋಲ-ವರ್ಮ (PBM) ರೋಗ ತಗಲಿ ರೈತರಿಗೆ ಅಪಾರ ನಷ್ಟ ಉಂಟು ಮಾಡಿರುವುದು ಸರ್ಕಾರ ಗಮನಕ್ಕೆ ಬಂದಿದೆಯೇ; ಇದರಿಂದ ರಾಜ್ಯದಲ್ಲಿ ಒಟ್ಟಾರೆ ಹತ್ತಿ ಬೆಳೆದಿರುವ ಪ್ರದೇಶದಲ್ಲಿ ರೋಗ ಪೀಡಿತ ಪ್ರದೇಶವೆಷ್ಟು; ಪೂರ್ಣ ಮಾಹಿತಿ ನೀಡುವುದು; | ರಾಜ್ಯದಲ್ಲಿ ಇತ್ತೀಚಿನ ವರ್ಷಗಳಲ್ಲಿ ಹತ್ತಿ ಬೆಳೆಗೆ ಪಿಂಕ್ ಬೋಲ್-ವರ್ಮ್ (PBM) (ಗುಲಾಬಿ ಕಾಯಿ ಕೊರಕ) ತಗಲಿ ರೈತರಿಗೆ ಅಪಾರ ನಷ್ಟ ಉಂಟು ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.<br><br>ಹತ್ತಿ ಬೆಳೆಯುವ ಪ್ರದೇಶದಲ್ಲಿ ಗುಲಾಬಿ ಕಾಯಿ ಕೊರಕ ಅಲ್ಪ ಪ್ರಮಾಣದಲ್ಲಿ ಕಂಡು ಬಂದಿದ್ದರೂ ಸಹ ಸಕಾಲದಲ್ಲಿ ನಿರ್ವಹಣಾ ಕ್ರಮಗಳನ್ನು ರೈತರು ಅನುಸರಿಸಿದ್ದರಿಂದ ಹಾಗೂ ಇಲಾಖೆಯ ವತಿಯಿಂದ ಪೀಡೆ ನಿರ್ವಹಣೆ ಬಗ್ಗೆ ತಾಂತ್ರಿಕ ಸಲಹೆಗಳನ್ನು ನೀಡಿದ್ದರಿಂದ ಯಾವುದೇ ಆರ್ಥಿಕ ಹಾನಿ ವರದಿಯಾಗಿರುವುದಿಲ್ಲ. |
| ಈ) | ಹಾಗಿದ್ದಲ್ಲಿ, ಕೇಂದ್ರ ಸರ್ಕಾರದ ಕೇಂದ್ರ ಕೀಟನಾಶಕ ಮಂಡಲಿ ಮತ್ತು ನೋಂದಣಿ ಸಮಿತಿ (CIBRC) ವತಿಯಿಂದ ಕೈಗೊಂಡಿರುವ ರೋಗ ನಿಯಂತ್ರಣ ಕ್ರಮಗಳು ಯಾವುವು? (ಪೂರ್ಣ ಮಾಹಿತಿ ನೀಡುವುದು) | ಕೇಂದ್ರೀಯ ಕೀಟನಾಶಕ ಮಂಡಳಿ ಮತ್ತು ನೋಂದಣಿ ಸಮಿತಿಯನ್ನು ಕೀಟನಾಶಕ ಕಾಯ್ದೆಯನ್ವಯ ಸ್ಥಾಪಿಸಲಾಗಿದ್ದು, ಕೇಂದ್ರೀಯ ಕೀಟನಾಶಕ ಮಂಡಳಿ (CIB) ಕೀಟನಾಶಕ ಕಾಯಿದೆಯ ಆಡಳಿತದಿಂದ ಉಂಟಾಗುವ ತಾಂತ್ರಿಕ ವಿಷಯಗಳ ಕುರಿತು ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರಗಳಿಗೆ ಸಲಹೆ ನೀಡುತ್ತದೆ.<br><br>ಕೇಂದ್ರೀಯ ಕೀಟನಾಶಕ ಮಂಡಳಿಗೆ ನಿಯೋಜಿಸಲಾದ ಪ್ರಮುಖ ಕಾರ್ಯಗಳು ಈ ಕೆಳಕಂಡಂತಿರುತ್ತವೆ.<br><br>1. ಕೈಗಾರಿಕೆಗಳ (ಅಭಿವೃದ್ಧಿ ಮತ್ತು ನಿಯಂತ್ರಣ) ಕಾಯಿದೆ, 1951 (1951 ರ 65) ಅಡಿಯಲ್ಲಿ ಕೀಟನಾಶಕಗಳ |

| | | |
|---|---|---|
| | | ತಯಾರಿಕೆಯ ಕುರಿತು ಕೇಂದ್ರ ಸರ್ಕಾರಕ್ಕೆ ಸಲಹೆ ನೀಡುವುದು.<br>2. ಕೀಟನಾಶಕಗಳ ವರ್ಗೀಕರಣದ ಉಪಯೋಗಗಳನ್ನು ಅವುಗಳ ವಿಷತ್ವದ ಆಧಾರದ ಮೇಲೆ ಮತ್ತು ವೈಮಾನಿಕ ಬಳಕೆಗೆ ಸೂಕ್ತವಾದವು ಎಂಬುದನ್ನು ಸೂಚಿಸುವುದು.<br>3. ಕೀಟನಾಶಕಗಳ ಅವಶೇಷಗಳಿಗೆ ಸಹಿಷ್ಣುತೆಯ ಮಿತಿಗಳನ್ನು ಸಲಹೆ ಮಾಡಿ ಮತ್ತು ವಿವಿಧ ಸರಕುಗಳಿಗೆ ಸಂಬಂಧಿಸಿದಂತೆ ಕೀಟನಾಶಕಗಳ ಬಳಕೆ ಮತ್ತು ಕೊಯ್ಲು ನಡುವೆ ಕನಿಷ್ಠ ಮಧ್ಯಂತರಗಳನ್ನು ಸ್ಥಾಪಿಸುವುದು.<br>4. ಕೀಟನಾಶಕಗಳ ಶೆಲ್ಫ್-ಲೈಫ್ (ಅವಧಿ ಮುಗಿಯುವ) ಅನ್ನು ಸೂಚಿಸುವುದು.<br>ಕೇಂದ್ರೀಯ ಕೀಟನಾಶಕ ಮಂಡಳಿ ಮತ್ತು ನೋಂದಣಿ ಸಮಿತಿ ವತಿಯಿಂದ ಯಾವುದೇ ಕೀಟ/ರೋಗ ನಿಯಂತ್ರಣ ಕ್ರಮಗಳನ್ನು ಕೈಗೊಳ್ಳುವುದಿಲ್ಲ. |

ಸಂಖ್ಯೆ: AGRI/29/ACT/2024

(ಎನ್. ಚಲುವರಾಯಸ್ವಾಮಿ)
ಕೃಷಿ ಸಚಿವರು

## ಅನುಬಂಧ (ಎಲ್.ಸಿಕ್ಯೂ-984)

## ಹತ್ತಿ ಬೆಳೆಯ ವರ್ಷವಾರು ಹಾಗೂ ಜಿಲ್ಲಾವಾರು ವಿಸ್ತೀರ್ಣ, ಉತ್ಪಾದನೆ ಹಾಗೂ ಇಳುವರಿಯ ಮಾಹಿತಿ

ವಿಸ್ತೀರ್ಣ ಹೆಕ್ಟೇರ್ ಗಳಲ್ಲಿ, ಉತ್ಪಾದನೆ ಬೇಲ್ ಗಳಲ್ಲಿ (Bales of 170kgs each in lint form , ಇಳುವರಿ ಕೆ.ಜಿ/ಹೆ.

| ಕ್ರ. ಸಂ. | ಜಿಲ್ಲೆಗಳು | 2020-21 | | | 2021-22 | | | 2022-23 | | |
|---|---|---|---|---|---|---|---|---|---|---|
| | | ವಿಸ್ತೀರ್ಣ | ಉತ್ಪಾದನೆ | ಇಳುವರಿ | ವಿಸ್ತೀರ್ಣ | ಉತ್ಪಾದನೆ | ಇಳುವರಿ | ವಿಸ್ತೀರ್ಣ | ಉತ್ಪಾದನೆ | ಇಳುವರಿ |
| 1 | ಬಾಗಲಕೋಟೆ | 2729 | 7142 | 454 | 1906 | 4952 | 451 | 2801 | 8468 | 524 |
| 2 | ಬೆಂಗಳೂರು ನಗರ | 0 | 0 | 0 | 0 | 0 | 0 | 2 | 6 | 555 |
| 3 | ಬೆಂಗಳೂರು ಗ್ರಾಮಾಂತರ | 2 | 6 | 489 | 1 | 3 | 502 | 2 | 6 | 555 |
| 4 | ಬೆಳಗಾವಿ | 40969 | 95744 | 405 | 24386 | 55939 | 398 | 32986 | 70751 | 372 |
| 5 | ಬಳ್ಳಾರಿ | 51343 | 167965 | 567 | 35714 | 100573 | 489 | 36711 | 122905 | 581 |
| 6 | ಬೀದರ್ | 3478 | 9776 | 488 | 2658 | 7595 | 496 | 3615 | 8107 | 389 |
| 7 | ವಿಜಯಪುರ | 48185 | 98817 | 356 | 36384 | 99647 | 475 | 87181 | 248903 | 495 |
| 8 | ಚಾಮರಾಜನಗರ | 9371 | 12162 | 225 | 7496 | 13283 | 307 | 8823 | 16577 | 326 |
| 9 | ಚಿಕ್ಕಬಳ್ಳಾಪುರ | 146 | 274 | 326 | 216 | 420 | 338 | 508 | 677 | 231 |
| 10 | ಚಿಕ್ಕಮಗಳೂರು | 1016 | 5890 | 1005 | 1783 | 4513 | 439 | 3823 | 8883 | 403 |
| 11 | ಚಿತ್ರದುರ್ಗ | 11541 | 26669 | 401 | 11043 | 23363 | 367 | 24318 | 35948 | 256 |
| 12 | ದಕ್ಷಿಣಕನ್ನಡ | 0 | 0 | 0 | 0 | 0 | 0 | 0 | 0 | 0 |
| 13 | ದಾವಣಗೆರೆ | 1793 | 4001 | 387 | 1285 | 2184 | 295 | 2268 | 3340 | 255 |
| 14 | ಧಾರವಾಡ | 90784 | 159562 | 305 | 57038 | 102918 | 313 | 50035 | 86946 | 301 |
| 15 | ಗದಗ | 35566 | 74306 | 362 | 22011 | 53010 | 418 | 23111 | 40665 | 305 |
| 16 | ಕಲಬುರಗಿ | 109982 | 254532 | 401 | 68884 | 206283 | 519 | 137075 | 434534 | 550 |
| 17 | ಹಾಸನ | 435 | 1185 | 473 | 677 | 1654 | 424 | 1591 | 3809 | 415 |
| 18 | ಹಾವೇರಿ | 40215 | 79052 | 341 | 26094 | 60771 | 404 | 30145 | 23164 | 133 |
| 19 | ಕೊಡಗು | 1 | 3 | 489 | 0 | 0 | 0 | 0 | 0 | 0 |
| 20 | ಕೋಲಾರ | 16 | 16 | 174 | 20 | 39 | 337 | 124 | 112 | 156 |
| 21 | ಕೊಪ್ಪಳ | 12960 | 27270 | 365 | 17618 | 32126 | 316 | 17802 | 33853 | 330 |
| 22 | ಮಂಡ್ಯ | 2 | 6 | 489 | 5 | 14 | 502 | 3 | 7 | 421 |
| 23 | ಮೈಸೂರು | 30387 | 50093 | 286 | 26157 | 34044 | 226 | 34111 | 40878 | 208 |
| 24 | ರಾಯಚೂರು | 174167 | 528978 | 527 | 173637 | 428301 | 428 | 235875 | 975996 | 718 |
| 25 | ರಾಮನಗರ | 2 | 6 | 489 | 5 | 8 | 282 | 1 | 3 | 555 |
| 26 | ಶಿವಮೊಗ್ಗ | 324 | 898 | 482 | 268 | 776 | 502 | 273 | 873 | 555 |
| 27 | ತುಮಕೂರು | 3128 | 6905 | 383 | 4520 | 6045 | 232 | 7537 | 12082 | 278 |
| 28 | ಉಡುಪಿ | 0 | 0 | 0 | 0 | 0 | 0 | 0 | 0 | 0 |
| 29 | ಉತ್ತರಕನ್ನಡ | 404 | 981 | 422 | 248 | 671 | 469 | 374 | 681 | 316 |
| 30 | ವಿಜಯನಗರ* | | | | | | | 6706 | 11132 | 288 |
| 31 | ಯಾದಗಿರಿ | 167815 | 704549 | 728 | 167471 | 713531 | 739 | 221081 | 849450 | 667 |
| | **ರಾಜ್ಯ** | **836759** | **2316788** | **480** | **687525** | **1952666** | **493** | **968882** | **3038758** | **544** |

*2020-21 ಮತ್ತು 2021-22ನೇ ಸಾಲಿನಲ್ಲಿ, ವಿಜಯನಗರ ಜಿಲ್ಲೆಯು ಬಳ್ಳಾರಿ ಜಿಲ್ಲೆಯಲ್ಲಿ ಇರುತ್ತದೆ.

ಮೂಲ: 2020-21 , 2021-22, 2022-23ನೇ ಸಾಲಿನ ವಿಸ್ತೀರ್ಣ, ಉತ್ಪಾದನೆ ಹಾಗೂ ಇಳುವರಿಯು ಅಂತಿಮ ಅಂದಾಜು ವರದಿಯನ್ವಯ, ಆರ್ಥಿಕ ಮತ್ತು ಸಾಂಖ್ಯಿಕ ಇಲಾಖೆ, ಬೆಂಗಳೂರು.